ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
C/o , ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01, ಕರ್ನಾಟಕ
E-mail ID:icps.kar@gmail.com Ph.No.080-22879381/82

ಸಂಖ್ಯೆ:ಕರಾಮರಸೊ/ಐಇಸಿ/ಕ-19/47/2019-20 ದಿನಾಂಕ:18-3-2020

## ಸುತ್ತೋಲೆ

ವಿಷಯ: ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕೋವಿಡ್-19 (ಕೊರೋನಾ ವೈರಸ್ ಡಿಸೀಜ್) ರ ಕಾಯಿಲೆಯ ಸ್ಪೋಟ ಮತ್ತು ಹರಡುವುದನ್ನು ತಡೆಗಟ್ಟಲು ಮುಂಜಾಗ್ರತೆಗಾಗಿ ಕ್ರಮವಹಿಸುವ ಬಗ್ಗೆ.

********

ಕೋವಿಡ್-19 (ಕೊರೋನಾ ವೈರಸ್ ಡಿಸೀಜ್) ಹರಡುವುದನ್ನು ತಡೆಗಟ್ಟಲು ಮುಂಜಾಗ್ರತೆಗಾಗಿ ಎಲ್ಲಾ ಸರ್ಕಾರಿ ಹಾಗೂ ಸರ್ಕಾರೇತರ ಸಿಸಿಐಗಳಲ್ಲಿ ಜಿಲ್ಲೆಗಳಲ್ಲಿನ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಮ್ಮ ಅಧೀನದಲ್ಲಿರುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕೋವಿಡ್-19(ಕೊರೋನಾ ವೈರಸ್ ಡಿಸೀಜ್) ಕುರಿತಂತೆ ಸುತ್ತೋಲೆಯಲ್ಲಿನ ಎಲ್ಲಾ ಕ್ರಮಗಳನ್ನು ಕಡ್ಡಾಯವಾಗಿ ಕೈಗೊಳ್ಳುವುದು.

**ಜಿಲ್ಲೆಗಳಲ್ಲಿ ಈ ಕೆಳಕಂಡ ಮುಂಜಾಗ್ರತೆ ಕ್ರಮ ಕೈಗೊಳ್ಳುವುದು**

- ನುರಿತ ವೈದ್ಯರಿಂದ ಕೋವಿಡ್-19 (ಕೊರೋನಾ ವೈರಸ್ ಡಿಸೀಜ್) ಕುರಿತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಅಧಿಕಾರಿ/ಸಿಬ್ಬಂದಿಗಳು ಹಾಗೂ ಮಕ್ಕಳು ಆಗಾಗ ಕೈಗಳು ಕೊಳಕಾಗಿದಂತೆ ಕಾಣದಿದ್ದರೂ ಸಹ ಹ್ಯಾಂಡ್ ವಾಷ್ ಲಿಕ್ವೀಡ್‌ನ್ನು(ಸೋಪ್‌ಗಿಂತಲೂ ಹ್ಯಾಂಡ್‌ವಾಷ್ ಉತ್ತಮ) ಹಾಕಿಕೊಂಡು ಕನಿಷ್ಠ 20 ಸೆಕೆಂಡ್‌ಗಳವರೆಗೆ ನೀರಿನಿಂದ ಕೈ ತೊಳೆಯುವುದು.
- ಸಂಸ್ಥೆಗಳ ಮಕ್ಕಳಿಗೆ ಸ್ಯಾನಿಟೈಸರ್(ಆಲ್ಕೋಹಾಲ್ ಒಳಗೊಂಡಿರುವ) ಉಪಯೋಗಿಸುವ ಕುರಿತು ಪ್ರಾತ್ಯಾಕ್ಷಿಕೆ ಮೂಲಕ ಮಾಹಿತಿ ನೀಡುವುದು.
- ಮಕ್ಕಳು ಕಣ್ಣು, ಮೂಗು ಬಾಯಿಯನ್ನು ಮುಟ್ಟಿಕೊಳ್ಳಬಾರದೆಂಧು ತಿಳಿವಳಿಕೆ ನೀಡುವುದು.
- ಮಕ್ಕಳಿಗೆ ಹಸ್ತಲಾಘನ(ಕೈ-ಕುಲುಕು) ಮತ್ತು ಆಲಿಂಗನವನ್ನು ಮಾಡಬಾರದು ಎಂದು to avoid touching each other ಎಂದು ತಿಳಿಸುವುದು.
- ಮಕ್ಕಳಿಗೆ ವೈಯಕ್ತಿಕ ಸ್ವಚ್ಚತೆಯನ್ನು ಕಾಪಾಡಿಕೊಳ್ಳಲು ಸೂಚನೆಗಳನ್ನು ನೀಡುವುದು.
- ಮಕ್ಕಳಿಗೆ ಒದಗಿಸುತ್ತಿರುವ ಆಹಾರವನ್ನು ಸಂಸ್ಥೆಯಲ್ಲಿಯೇ ಸಿದ್ದಪಡಿಸುವುದು. ಹೊರಗಡೆ ತಯಾರಿಸಿದ ಆಹಾರ ಪದಾರ್ಥಗಳನ್ನು ಯಾವುದೇ ಕಾರಣಕ್ಕೂ ಸಂಸ್ಥೆಯಲ್ಲಿರುವ ಮಕ್ಕಳಿಗೆ ವಿತರಿಸಬಾರದು ಹಾಗೂ ಅಡುಗೆ ಕೋಣೆಯಲ್ಲಿ ಶುಚಿತ್ವವನ್ನು ಕಾಪಾಡುವುದು.

Scanned by CamScanner

- ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ ಅಧಿಕಾರಿ/ಸಿಬ್ಬಂದಿಗಳು ಸಂಸ್ಥೆಗಳಲ್ಲಿ ದಾಖಲಾಗಿರುವ ಮಕ್ಕಳಲ್ಲಿ ಶೀತ, ಜ್ವರ, ಕೆಮ್ಮು ಕಂಡು ಬಂದ ತಕ್ಷಣ ತುರ್ತು ಎಂದು ಪರಿಗಣಿಸಿ ಚಿಕಿತ್ಸೆ ಕೊಡಿಸಲು ಕ್ರಮ ಕೈಗೊಳ್ಳುವುದು. ಹಾಗೂ ಸದರಿ ಮಗುವನ್ನು ಪ್ರತ್ಯೇಕವಾಗಿರಿಸಿ ನಿರಂತರ ಆರೋಗ್ಯ ತಪಾಸಣೆ ಒದಗಿಸಿ ಪ್ರತ್ಯೇಕ ಶ್ರದ್ಧೆಯಿಂದ ನೋಡಿಕೊಳ್ಳುವುದು ಹಾಗೂ ಕೋವಿಡ್-19 ಲಕ್ಷಣಗಳಿಂದು ಸಂದೇಹವಿದ್ದಲ್ಲಿ ತಕ್ಷಣಾ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳ ಗಮನಕ್ಕೆ ತರುವುದು.
- ಮಕ್ಕಳಿಗೆ ಮಾತ್ರವಲ್ಲದೆ ಮಕ್ಕಳ ಪಾಲನಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಲ್ಲಿ ಶೀತ, ಕೆಮ್ಮು, ಜ್ವರದ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಚಿಕಿತ್ಸೆಗಾಗಿ ಕೂಡಲೇ ರಜೆಯ ಮೇಲೆ ಕಳುಹಿಸುವುದು.
- ಹೊಸದಾಗಿ ಸಂಸ್ಥೆಗೆ ದಾಖಲಾಗುವ ಮಕ್ಕಳ ವಿಷಯದಲ್ಲಿ ದಾಖಲಾತಿಗೆ ಮುನ್ನವೇ ಮಕ್ಕಳನ್ನು ಕೋವಿಡ್-19(ಕರೋನಾ ವೈರಾಣು)ಪತ್ತೆಗಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು. ಕೋವಿಡ್-19 ಪಾಸಿಟೀವ್ ಲಕ್ಷಣ ಇದ್ದರೆ ತಕ್ಷಣ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಇವರ ಗಮನಕ್ಕೆ ತರತಕ್ಕದ್ದು. ನೆಗೆಟೀವ್ ವರದಿ ಬಂದ ಮಕ್ಕಳನ್ನು ಸಂಸ್ಥೆಗೆ ದಾಖಲಿಸಿದ್ದಾಗ್ಯೂ ಮುಂಜಾಗ್ರತಾ ಕ್ರಮವಾಗಿ ಸಂಸ್ಥೆಗೆ ಸೇರಿಸಿಕೊಂಡ ಹೊಸ ದಾಖಲಾತಿ ಮಗುವನ್ನು 14 ದಿನಗಳ ಕಾಲ ಸಂಸ್ಥೆಯಲ್ಲಿಯೇ ಪ್ರತ್ಯೇಕವಾಗಿರಿಸಿ ನಿಗಾ ವಹಿಸುವುದು. ಈ ಬಗ್ಗೆ ಹೋಂ ಕ್ವಾರಂಟೈನ್(Home Quarantine) ಕುರಿತ ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ನು ಈ ಸುತ್ತೋಲೆಗೆ ಮಾಹಿತಿಗಾಗಿ ಲಗತ್ತಿಸಲಾಗಿದೆ.
- ಮಕ್ಕಳಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸುವುದಕ್ಕೆ ಸಂಬಂಧಿಸಿದಂತೆ ಶುದ್ಧೀಕರಣ ಯಂತ್ರಕ್ಕೆ ದುರಸ್ಥಿ ಅವಶ್ಯವಿದ್ದರೆ ದುರಸ್ಥಿಗೊಳಿಸುವುದು (RO) ಅಥವಾ ಹೊಸ ಶುದ್ಧೀಕರಣ ಯಂತ್ರ ಖರೀದಿಸುವುದು/ ಐಎಸ್ಐ ಮಾರ್ಕ್ ಇರುವ ನೀರನ್ನು ಪೂರೈಸುವುದು ಮತ್ತು ಕುದಿಸಿ ಆರಿಸಿದ ನೀರನ್ನು ಕುಡಿಯಲು ಕೊಡುವುದು.
- ಕೋವಿಡ್-19 ಹಿನ್ನೆಲೆಯಲ್ಲಿ ನೀರಿನ ಬಳಕೆ ಹೆಚ್ಚಾಗಿ ಅವಶ್ಯವಿದ್ದು, ನಿತ್ಯದ ಬಳಕೆಗೆ ಸಾಕಷ್ಟು ನೀರನ್ನು ಒದಗಿಸಲು ಅಗತ್ಯವಿದ್ದಲ್ಲಿ ಖರೀದಿಸಿ ಒದಗಿಸಲು ಕ್ರಮ ಕೈಗೊಳ್ಳುವುದು.
- ಮಕ್ಕಳ ಪಾಲನಾ ಸಂಸ್ಥೆಗಳಿಗೆ ತಾತ್ಕಾಲಿಕವಾಗಿ ಸಂದರ್ಶಕರ ಭೇಟಿಯನ್ನು ನಿರ್ಬಂಧಿಸುವುದು. ಅನಿವಾರ್ಯ ಪರಿಸ್ಥಿತಿಗಳಲ್ಲಿ ಸಂದರ್ಶಕರು ಸಂಸ್ಥೆಯ ಮುಖ್ಯದ್ವಾರಗಳ ಒಳಗೆ ಪ್ರವೇಶಿಸಬೇಕಾದಲ್ಲಿ ಕೈ, ಕಾಲು ತೊಳೆದುಕೊಂಡು ಬರಲು ನೀರು, ಹ್ಯಾಂಡ್‌ವಾಷ್ ಮತ್ತು ಸ್ಯಾನಿಟೈಜರ್ ವ್ಯವಸ್ಥೆ ಪ್ರವೇಶ ದ್ವಾರದಲ್ಲಿಯೇ ಏರ್ಪಾಡು ಮಾಡುವುದು.
- ಸಂಸ್ಥೆಗಳಲ್ಲಿನ ದಾದಿ, ಗೃಹಪಾಲಕ/ಗೃಹಪಾಲಕಿ ಮತ್ತು ಆಪ್ತ ಸಮಾಲೋಚಕರು ಹೆಚ್ಚಿನ ಕಾಳಜಿವಹಿಸಿ ಮಕ್ಕಳ ಪಾಲನೆಯನ್ನು ಮಾಡುವುದು.
- ಭದ್ರತಾ ಸಿಬ್ಬಂದಿಯು ಸಂಸ್ಥೆಯ(ಒಳ ಹಾಗೂ ಹೊರಗಳಲ್ಲಿ) ನೈರ್ಮಲ್ಯ ಕಾಪಾಡುವುದು ಹಾಗೂ ಅವರ ವೈಯುಕ್ತಿಕ ಶುಚಿತ್ವ ಕಾಪಾಡುವುದು.
- ಮಕ್ಕಳು ಸೀನುವಾಗ ಹಾಗೂ ಕೆಮ್ಮುವಾಗ ಯಾವುದೇ ಬಟ್ಟೆ ಕರವಸ್ತ್ರ ಬಳಸದೆ ಕಾಗದದ ಕರವಸ್ತ್ರ (ಟಿಶ್ಯೂ) ಬಳಸುವಂತೆ ಸೂಚನೆ ನೀಡುವುದು ಹಾಗೂ ಬಳಸಿದ ಕರವಸ್ತ್ರಗಳನ್ನು ಮುಚ್ಚಿದ ಕಸದ ಡಬ್ಬಿಗೆ ಹಾಕುವುದು ಮತ್ತು ನಿತ್ಯ ಕಸ ವಿಲೇವಾರಿ ಮಾಡುವುದು. ಕಸ ವಿಲೇವಾರಿ ಮಾಡುವ ಸಿಬ್ಬಂದಿಯವರು ಸೂಕ್ತ ಮುನ್ನೆಚ್ಚರಿಗೆ ವಹಿಸಿಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಕೋವಿಡ್-19 (ಕೊರೋನಾ ವೈರಸ್) ಕುರಿತ ಅಗತ್ಯ ಸೂಚನೆಗಳನ್ನು ನಾಮಫಲಕದಲ್ಲಿ ಪ್ರದರ್ಶಿಸುವುದು.

Scanned by CamScanner

- ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳನ್ನು ಪೋಷಕರು/ಪಾಲಕರು ಮರಳಿ ಮನೆಗೆ ಕರೆದುಕೊಂಡು ಹೋಗಲು ಬಂದಲ್ಲಿ ಪೋಷಕರೊಂದಿಗೆ ಮಕ್ಕಳನ್ನು ಕಳುಹಿಸುವ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿಯ ಆದೇಶ ಪಡೆದು ಕ್ರಮವಹಿಸುವುದು ಹಾಗೂ ಸರ್ಕಾರಿ ವೀಕ್ಷಣಾಲಯಗಳಲ್ಲಿ ಈ ಬಗ್ಗೆ ಬಾಲನ್ಯಾಯ ಮಂಡಳಿಯ ಆದೇಶ ಪಡೆದು ಕ್ರಮವಹಿಸುವುದು.
- ಕೋವಿಡ್-19 ಗೆ ಸಂಬಂದಿಸಿದಂತೆ ವ್ಯಕ್ತಿ/ಸಂಸ್ಥೆ/Organization ಇವರುಗಳಿಂದ ಮುದ್ರಣ ಅಥವಾ ಎಲೆಕ್ಟ್ರಾನಿಕ್ ಅಥವಾ ಸಾಮಾಜಿಕ ಮಾಧ್ಯಮಗಳನ್ನು ಬಳಸಿ ಉಹಾಪೋಹ ಮತ್ತು ವಂದತಿಗಳನ್ನು ಹರಡುವುದನ್ನು ತಪ್ಪಿಸುವುದು ಅವಶ್ಯಕವಾಗಿದೆ. ಇಂತಹ ಚಟುವಟಿಕೆಯಲ್ಲಿ ಯಾವುದೇ ವ್ಯಕ್ತಿ/ಸಂಸ್ಥೆ/Organizationಗಳು ತೊಡಗಬಾರದು. ಹಾಗೂ ಕೋವಿಡ್-19 ಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯು ದೃಢೀಕರಿಸಿದ ಮಾಹಿತಿಯನ್ನು ಮಾತ್ರ ಪರಿಗಣಿಸತಕ್ಕದ್ದು. ಹಾಗೂ ಕೋವಿಡ್-19 ಗೆ ಸಂಬಂಧಿಸಿದ ಉಹಾಪೋಹ ಮತ್ತು ವದಂತಿಗಳ ಮಾಹಿತಿಯನ್ನು ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಅನುಸರಿಸಬಾರದು.
- ವಿಶೇಷ ದತ್ತು ಸಂಸ್ಥೆಗಳಿಗೆ ದತ್ತು ಮಾಹಿತಿ ಪಡೆಯಲು ಭೇಟಿ ನೀಡುವವರನ್ನು ಸರ್ಕಾರದ ಮುಂದಿನ ಆದೇಶದವರೆಗೆ ತಡೆಯುವುದು.
- PAP's ಗೃಹ ಬೇಟಿ ಮತ್ತು ಮಕ್ಕಳ follow up ಮಾಡುವ ಸಂದರ್ಭದಲ್ಲಿ ಅವಶ್ಯಕ ಮುನ್ನೆಚ್ಚರಿಕೆ ಕ್ರಮಗಳನ್ನು ಸಿಬ್ಬಂದಿಯವರು ಅನುಸರಿಸುವುದು.
- ವಿದೇಶ, ರಾಜ್ಯ ಮತ್ತು ಹೊರರಾಜ್ಯ ದತ್ತು ಪ್ರಕರಣಗಳಲ್ಲಿ ಈಗಾಗಲೇ ಎಲ್ಲಾ ದತ್ತು ಪ್ರಕ್ರಿಯೆಗಳು ಮುಗಿದಿದ್ದು ಮಗುವನ್ನು PAPs ಗೆ ದತ್ತು ನೀಡುವ ಹಂತದಲ್ಲಿದ್ದರೆ ಹಾಗೂ ದತ್ತು ಸಂಸ್ಥೆಯ ಒಳಗಡೆ ಪ್ರವೇಶಿಸಲು ಇಚ್ಛಿಸುವ PAP's ಅವರಿಗೆ ಕೊರೊನ ವೈರಸ್‌ನ ಸೋಂಕಿತರಲ್ಲವೆಂದು ವೈದ್ಯರಿಂದ ಪ್ರಮಾಣಪತ್ರ ಹಾಜರುಪಡಿಸತಕ್ಕದ್ದು.
- ಸಂಸ್ಥೆಯಲ್ಲಿ ಕೊರೋನಾ ವೈರಸ್ ಹರಡುವಿಕೆಯನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು ಮಕ್ಕಳಿಗೆ ಹಾಗೂ ಸಿಬ್ಬಂದಿಗೆ ಏನು ಮಾಡಬೇಕು ಮತ್ತು ಮಾಡಬಾರದು ಎಂಬ ಅಂಶಗಳ ಪಟ್ಟಿಯನ್ನು ಸಿದ್ಧಪಡಿಸಿ ಮಕ್ಕಳು ಪದೇ ಪದೇ ಓದಲು ಅನುಕೂಲವಾಗುವ ಸ್ಥಳದಲ್ಲಿ ಪ್ರದರ್ಶಿಸುವುದು. ಈ ಸಂಬಂಧ ಆರೋಗ್ಯ ಇಲಾಖೆ ಸಿದ್ಧಪಡಿಸಿದ ಐ.ಇ.ಸಿ. ಸಾಮಾಗ್ರಿಯನ್ನು ಮುಖ್ಯವಾಗಿ ಮಕ್ಕಳಸ್ನೇಹಿ ಪೋಸ್ಟರ್ಸ್ ಮತ್ತು ಕಾರ್ಟೂನ್‌ಗಳು(Kids, Vaayu and Corona who wins the fight? ಇದರ ಲಿಂಕ್ ಅನ್ನು ಇ-ಮೇಲ್ ಮುಖಾಂತರ ಕಳುಹಿಸಲಾಗುವುದು) ಹಾಗೂ ಕೋವಿಡ್ ಸಹಾಯವಾಣಿ ಸಂಖ್ಯೆಗಳನ್ನು ಸ್ಪಷ್ಟವಾಗಿ ಕಾಣಿಸುವಂತಹ ಪ್ರದೇಶಗಳಲ್ಲಿ ಪ್ರದರ್ಶಿಸುವುದು.
- ಕೋವಿಡ್-19 ಗೆ ಸಂಬಂಧಿಸಿದಂತೆ ರಾಷ್ಟ್ರೀಯ ಸಹಾಯವಾಣಿ-1075 ಮತ್ತು 180000-112-545 ಹಾಗೂ ಕರ್ನಾಟಕ ರಾಜ್ಯದ ಸಹಾಯವಾಣಿ ಸಂಖ್ಯೆ-104 ಅನ್ನು ಅಗತ್ಯವಿದ್ದಲ್ಲಿ ಸಂಪರ್ಕಿಸಬಹುದಾಗಿದೆ.
- ಮಕ್ಕಳ ರಕ್ಷಣಾ ಸಂಸ್ಥೆಗಳಿಗೆ ದೇಶೀಯ ಮತ್ತು ವಿದೇಶೀಯ ಗಣ್ಯವ್ಯಕ್ತಿಗಳ ಸಂದರ್ಶನವನ್ನು ಆದಷ್ಟು ನಿರುತ್ಸಾಹಗೊಳಿಸುವುದು. ಅವಶ್ಯಕವೆನಿಸಿದಲ್ಲಿ ಪ್ರಧಾನ ಕಛೇರಿಯಿಂದ ಅನುಮತಿ ಪಡೆಯುವುದು.
- ಅತ್ಯಾವಶ್ಯಕ ಸಂದರ್ಭವನ್ನು ಹೊರತುಪಡಿಸಿ ಮಕ್ಕಳನ್ನು ಸಂಸ್ಥೆಯಿಂದ ಹೊರಗೆ ಕರೆದೊಯ್ಯಬಾರದು.

Scanned by CamScanner

- ಮಕ್ಕಳು ಇಡೀ ದಿನ ಸಂಸ್ಥೆಯಲ್ಲಿರುವುದರಿಂದ ಅವರಿಗೆ ಬೇಸರವಾಗದಂತೆ ಸಂಸ್ಥೆಯೊಳಗಿನ ಮಕ್ಕಳ ಒಳಾಂಗಣ ಆಟಕ್ಕೆ ಸೂಕ್ತ ವ್ಯವಸ್ಥೆ ಮಾಡುವುದು. ಅಲ್ಲದೇ ಮಕ್ಕಳು ಎಲ್ಲರೂ ಒಂದೇ ಕಡೆ ಗುಂಪಾಗಿ ಸೇರಿ ಆಡುವ ಆಟಗಳನ್ನು ಹೊರತುಪಡಿಸಿ, Spread ಆಗಿ- ಆಡುವ ಅಥವಾ ತೊಡಗಿಕೊಳ್ಳಲು ಅನುವಾಗುವ ಆಟ ಅಥವಾ ಕಲೆಗಳನ್ನು ಪ್ರೋತ್ಸಾಹಿಸಲು ಸೂಚಿಸಿದೆ. ಅಗತ್ಯವಿದ್ದಲ್ಲಿ ನಿಯಾಮಾನುಸಾರ ಆಟಿಕೆಗಳನ್ನು ಹಾಗೂ ಕಲೆಗಳಿಗೆ ಅವಶ್ಯವಿರುವ ಚಟುವಟಿಕೆ ಸಾಮಗ್ರಿಗಳನ್ನು ಖರೀದಿಸಲು ಕ್ರಮವಹಿಸುವುದು. ಯಾವುದೇ ಕಾರಣಕ್ಕೂ ಮಕ್ಕಳನ್ನು ಸಂಸ್ಥೆಯಿಂದ ಮನೋರಂಜನೆಗಾಗಿ ಹೊರಗೆ ಕರೆದೊಯ್ಯಬಾರದು.

ಸುತ್ತೋಲೆಯಲ್ಲಿನ ಎಲ್ಲಾ ಅಂಶಗಳನ್ನು ಕಾರ್ಯಗತಗೊಳಿಸಿ 3 ದಿನಗಳ ಒಳಗಾಗಿ ಕೈಗೊಂಡ ಕ್ರಮಗಳ ಕುರಿತು ಕೇಂದ್ರ ಕಛೇರಿಗೆ ತಪ್ಪದೇ ಅನುಪಾಲನಾ ವರದಿ ಸಲ್ಲಿಸತಕ್ಕದ್ದು.

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು

Scanned by CamScanner